**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 274/2018**

| | | | |
|---|---|---|---|
| **ಹೆಸರು** | **:** | **ಹಂಪಣ್ಣ** | **ದೋ.ಸಾ. 1** |
| **ತಂದೆಯ ಹೆಸರು** | **:** | **ಯಮನಪ್ಪ** | **ಪ್ರಾ.ಸಾ. 1** |
| **ವಯಸ್ಸು** | **:** | **52 ವರ್ಷ** | **ದಿನಾಂಕಃ 21-04-2022** |
| **ಉದ್ಯೋಗ** | **:** | **ಸಹಾಯಕ ಕೃಷಿ ನಿರ್ದೇಶಕರು** | |
| **ವಾಸಸ್ಥಳ** | **:** | **ಸೇಡಂ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 14-02-2014 ರಿಂದ 16-05-2016 ರವರೆಗೆ ನಾನು ಚಿಂಚೋಳಿ ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕೆಲಸ ಮಾಡಿದ್ದೆ.

2014 ನೇ ಸಾಲಿನಲ್ಲಿ ನಮ್ಮ ತಾಲೂಕು ಪಂಚಾಯತಿ ಕಾರ್ಯಾಲದಲ್ಲಿ ಉಪಗೃಹ ತರಬೇತಿ ಶಾಖೆಯ ತರಬೇತಿ ಪ್ರಭಾರವನ್ನು ಆರೋಪಿ ಶಿವಶರಣಪ್ಪ ನಿರ್ವಹಿಸುತ್ತಿದ್ದನು.

ಸದರಿ ತರಬೇತಿಗೆ ತಗಲುವ ಖರ್ಚು ವೆಚ್ಚಕ್ಕಾಗಿ ನಮ್ಮ ಪಂಚಾಯತಿಯಿಂದ ದಿನಾಂಕ 30-07-2014 ರಂದು ಕೃಷ್ಣಾ ಗ್ರಾಮೀಣ ಬ್ಯಾಂಕಿಗೆ ಸೇರಿದ 280996 ರ ರೂ.5,690/- ರ ಚೆಕ್ಕನ್ನು ನಾನು ಮತ್ತು ಸಹಾಯಕ ಲೆಕ್ಕಾಧಿಕಾರಿಗಳಾದ ಚಾಸಾ-12 ರವರು ಜಂಟಿಯಾಗಿ ಸಹಿ ಮಾಡಿ ಆರೋಪಿಗೆ ಕೊಟ್ಟಿದ್ದು, ಸದರಿ ಚೆಕ್ಕನ್ನು ತಿದ್ದುಪಡಿ ಮಾಡಿದ ಆರೋಪಿ ರೂ.5,690/- ರೂಪಾಯಿ ಎಂದು ಬರೆದಿರುವ ಕಡೆ 4 ಎಂಬ ಅಂಕಿಯನ್ನು ಸೇರಿಸಿ ಒಟ್ಟು ರೂ.45,690/- ಗಳಿಗೆ ಚೆಕ್ಕು ಕೊಟ್ಟಿರುವಂತೆ ತಿದ್ದುಪಡಿ ಮಾಡಿ ಮತ್ತು ಅಕ್ಷರಗಳಲ್ಲಿ ನಲವತ್ತೆದು ಸಾವಿರದ ಆರು ನೂರಾ ತೊಂಬತ್ತು ಎಂದು ಬರೆದುಕೊಂಡು ಸದರಿ ಚೆಕ್ಕನ್ನು ತನ್ನ ಸ್ವಂತ ಬ್ಯಾಂಕ್ ಖಾತೆಗೆ ಜಮಾ ಮಾಡಿಕೊಂಡಿರುತ್ತಾನೆ.

ಅದೇ ರೀತಿ ದಿನಾಂಕ 09-09-2014 ರಂದು ನನ್ನ ಮತ್ತು ಚಾಸಾ-12 ರವರ ಜಂಟಿ ಸಹಿ ಇದ್ದ ಚೆಕ್ ನಂ.280997 ನ್ನು ತರಬೇತಿ ಖರ್ಚು ವೆಚ್ಚಕ್ಕಾಗಿ ತಗಲುವ ರೂ.6,150/- ಗಳಿಗೆ ಕೊಟ್ಟಿದ್ದು, ಸದರಿ ಚೆಕ್ಕನ್ನು ತಿದ್ದುಪಡಿ ಮಾಡಿ ಆರೋಪಿ, ರೂ.6,150/- ಎಂದು ಬರೆದಿರುವ ಕಡೆ 4 ಎಂಬ

ಅಂಕಿಯನ್ನು ಸೇರಿಸಿ ಒಟ್ಟು ರೂ.46,150/- ಗಳಿಗೆ ಚೆಕ್ಕು ಕೊಟ್ಟಿರುವ ರೀತಿ ತಿದ್ದುಪಡಿ ಮಾಡಿ ಮತ್ತು ಅಕ್ಷರಗಳಲ್ಲೂ ನಲವತ್ತಾರು ಸಾವಿರದ ನೂರಾ ಐವತ್ತು ಎಂದು ತಿದ್ದುಪಡಿ ಮಾಡಿ ಸದರಿ ಚೆಕ್ಕನ್ನೂ ಸಹ ತನ್ನ ಸ್ವಂತ ಬ್ಯಾಂಕ್ ಖಾತೆಗೆ ಜಮಾ ಮಾಡಿಕೊಂಡಿರುತ್ತಾನೆ.

ಮೇಲೆ ಉಲ್ಲೇಖಿಸಲಾದ ಎರಡು ಬ್ಯಾಂಕ್ ಚೆಕ್ಕುಗಳನ್ನು ನಮ್ಮ ಪಂಚಾಯತಿ ಬ್ಯಾಂಕ್ ಖಾತೆ ನಂ.2059049568 ರಿಂದ ಆರೋಪಿಗೆ ತರಬೇತಿ ವೆಚ್ಚಕ್ಕಾಗಿ ತಲಾ ರೂ.5,690/- ಮತ್ತು ರೂ.6,150/- ರೂ.ಗಳಿಗೆ ಕೊಟ್ಟಿದ್ದು, ಸದರಿ ಚೆಕ್ಕುಗಳನ್ನು ಮೇಲೆ ಹೇಳಿದಂತೆ ತಿದ್ದುಪಡಿ ಮಾಡಿಕೊಂಡಿದ್ದ ಆರೋಪಿ ತನ್ನ ವಯಕ್ತಿಕ ಬ್ಯಾಂಕ್ ಖಾತೆ ಸಂಖ್ಯೆ 11059100009766 ಕ್ಕೆ ಜಮಾ ಮಾಡಿಕೊಂಡು ಹೆಚ್ಚುವರಿಯಾಗಿ ರೂ.80,000/- ಸರಕಾರಿ ಹಣವನ್ನು ಸರಕಾರಕ್ಕೆ ವಂಚಿಸಿ ತನ್ನ ಸ್ವಂತ ಖಾತೆಗೆ ಚೆಕ್ಕನ್ನು ನಕಲು ಮಾಡಿ ಜಮಾ ಮಾಡಿಕೊಂಡಿರುತ್ತಾನೆ. ಸರಕಾರಕ್ಕೆ ಮೋಸ ಮಾಡುವ ಮಾಡುವ ಉದ್ದೇಶದಿಂದ ಆರೋಪಿ ನನ್ನ ಮತ್ತು ಚಾಸಾ-12 ರವರ ಜಂಟಿ ಸಹಿಗಳು ಇದ್ದ ಚೆಕ್ಕುಗಳನ್ನು ತಿದ್ದುಪಡಿ ಮಾಡಿ ಸರಕಾರಿ ಹಣವನ್ನು ತನ್ನ ಸ್ವಂತ ಉಪಯೋಗಕ್ಕೆ ಬಳಸಿಕೊಂಡಿರುತ್ತಾನೆ.

ಮೇಲ್ಕಂಡಂತೆ ಆರೋಪಿ ನಮ್ಮ ಇಲಾಖೆಗೆ ಮತ್ತು ಸರಕಾರಕ್ಕೆ ವಂಚಿಸಿರುವ ವಿಚಾರ 2015 ನೇ ಸಾಲಿನಲ್ಲಿ ನಮ್ಮ ಇಲಾಖೆಯ ಆಂತರಿಕ ಲೆಕ್ಕ ಪರಿಶೋಧನೆಯ ಸಂದರ್ಭದಲ್ಲಿ ಬೆಳಕಿಗೆ ಬಂದಿದ್ದು ಈ ಸಂಬಂಧ ದಿನಾಂಕ 21-01-2015 ರಂದು ನಾನು ಚಿಂಚೋಳಿ ಪೋಲೀಸರಿಗೆ ಆರೋಪಿ ವಿರುದ್ಧ ದೂರು ಕೊಟ್ಟಿರುತ್ತೇನೆ.

ಸದರಿ ದೂರನ್ನು ಈಗ ನೋಡುತ್ತಿದ್ದು, ಅದನ್ನೀಗ ನಿಪಿ-1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನನ್ನ ಮತ್ತು ಚಾಸಾ-12 ರವರ ಜಂಟಿ ಸಹಿ ಇರುವ ಮತ್ತು ನಾವು ಕ್ರಮವಾಗಿ ಕೇವಲ ರೂ.5,690/- ಮತ್ತು ರೂ.6,150/- ಗಳಿಗೆ ಕೊಟ್ಟಿದ್ದ ಮತ್ತು ಆರೋಪಿ ರೂ.45,690/- ಮತ್ತು ರೂ.46,150 ಎಂದು ತಿದ್ದುಪಡಿ ಮಾಡಿಕೊಂಡು ತನ್ನ ಬ್ಯಾಂಕ್ ಖಾತೆಗೆ ಜಮಾ ಮಾಡಿಕೊಂಡಿದ್ದ ಎರಡೂ ಚೆಕ್ಕುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ಸದರಿ ಚೆಕ್ಕುಗಳ ಮೇಲೆ ನನ್ನ ಸಹಿ ಇವೆ. ಸಾಕ್ಷಿ ನೋಡಿ ಗುರುತಿಸಿದ ರೂ.45,690/- ರೂಪಾಯಿ ಚೆಕ್ ಸಂಖ್ಯೆ 280996 ಈಗ ನಿಪಿ-2 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುಸಲಾಯಿತು. ಸಾಕ್ಷಿ ನೋಡಿ ಗುರುತಿಸಿದ ರೂ.46,150/-ರ ಚೆಕ್ ಸಂಖ್ಯೆ 280997 ನ್ನು ಈಗ ನಿಪಿ-3 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ದೂರು ಕೊಟ್ಟ ನಂತರ ಪೋಲೀಸರು ನಮ್ಮ ಕಚೇರಿಗೆ ಬಂದು ನಾನು ಹಾಜರುಪಡಿಸಿದ ನಮ್ಮ ಕಚೇರಿಯ ಪಾಸ್ ಬುಕ್ ಸ್ಟೇಟಮೆಂಟ್ ಮತ್ತು ಚೆಕ್ ವಿತರಿಸುವ ಮೆಮೊ ರಿಜಿಸ್ಟರನ್ನು ಪಂಚನಾಮೆ ಮೂಲಕ ಜಪ್ತು ಮಾಡಿರುತ್ತಾರೆ.

ಸದರಿ ಪಾಸ್ ಬುಕ್ ಸ್ಟೇಟಮೆಂಟ್ ಈಗ ನೋಡುತ್ತಿದ್ದು ಅದನ್ನೀಗ ನಿಪಿ-4 ಎಂದು, ನಾಲ್ಕು ಪುಟಗಳಿರುವ ಚೆಕ್ ವಿತರಿಸುವ ಮೆಮೊ ರಿಜಿಸ್ಟರನ ದೃಢೀಕೃತ ನಕಲನ್ನು ಈಗ ನೋಡುತ್ತಿದ್ದು ಅದನ್ನೀಗ ನಿಪಿ-5 ಎಂದು, ಅದರಲ್ಲಿರುವ ನನ್ನ ಸಹಿಗಳನ್ನು ನಿಪಿ-5(ಎ) ರಿಂದ (ಡಿ) ಎಂದು ಗುರುತಿಸಲಾಯಿತು.

ಈ ಪ್ರಕರಣಕ್ಕೆ ಸಂಬಂಧಪಟ್ಟ ದಿನಾಂಕ 29-06-2016 ರಂದು ನಾನು ಚಿಂಚೋಳಿ ಪೋಲೀಸರ ಮುಂದೆ ಮತ್ತೊಮ್ಮೆ ವಿವರವಾದ ಹೇಳಿಕೆಯನ್ನು ಕೊಟ್ಟಿರುತ್ತೇನೆ.

(ಈ ಹಂತದಲ್ಲಿ ತನಿಖಾಧಿಕಾರಿಯವರು ನಡೆಸಿರುವ ಸ್ಥಳ ಪಂಚನಾಮೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ನಾನು ದೂರು ಕೊಟ್ಟ ದಿನವೇ ಪೋಲೀಸರು ಚಾಸಾ-2 ಮತ್ತು 3 ರವರ ಸಮಕ್ಷಮ ಸಂಜೆ 4 ರಿಂದ 5 ಗಂಟೆಯವರೆಗೆ ಸ್ಥಳ ಪಂಚನಾಮೆ ಬರೆದರು ಎಂದರೆ ಸಾಕ್ಷಿ ಮೊದಲಿಗೆ ನಾನು ಇರಲಿಲ್ಲ ಎನ್ನುತ್ತಾರೆ ನಂತರ ಪುನಃ ಹೌದು ಪಂಚನಾಮೆ ಮಾಡಿದ್ದಾರೆ ಎನ್ನುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಸ್.ಎಸ್.ಎ. ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಗಿದೆ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**